
# ಚೆವ್ರಾನ್ ಕ್ವಿಲ್ಟ್

**ಈ ಟುಟೋರಿಯಲ್ಲಿನಲ್ಲಿ ನಾವು ಚೆವ್ರಾನ್ ಪ್ಯಾಟರ್ನ್ ಮಾಡಲು ಹೇಳಿಕೊಡುತ್ತೇವೆ ಆದರೆ ಕ್ವಿಲ್ಟಿಂಗ್ ಟೆಕ್ನಿಕ್ಕನ್ನು ಬಳಸಿ ಮಾಡಲು ಹೇಳಿಕೊಡುತ್ತೇವೆ.**



















ಚೆವ್ರಾನ್ ಕ್ವಿಲ್ಟ್

½ ಮೀಟರ್ ನ 3 ಪೀಸಸ್ ಪ್ರಿಂಟೆಡ್ ಬಟ್ಟೆ ಬಟ್ಟೆಯ ಅಳತೆ ಅಂತಿಮ ಕ್ವಿಲ್ಟಿನ ಉದ್ದ ಮತ್ತು ಅಗಲದ ಮೇಲೆ ಅವಲಂಬಿತವಾಗಿರುತ್ತದೆ.

1 ಮೀಟರ್ ಅಳತೆಯ 1 ಬಿಳಿ ಬಟ್ಟೆ ಈ ಬಟ್ಟೆ ಪ್ರಿಂಟೆಡ್ ಬಟ್ಟೆಯ ಎಲ್ಲಾ ಹಿಂಬದಿಗೆ ಹೊಲೆಯುವುದರಿಂದ ನಮಗೆ ಇನ್ನೂ ½ ಮೀಟರ್ ಹೆಚ್ಚಿನದ್ದು ಬೇಕಾಗುತ್ತದೆ.

ಕಟ್ಟಿಂಗ್ ಮ್ಯಾಟ್

ಕ್ವಿಲ್ಟಿಂಗ್ ರೂಲರ್

ರೋಟರಿ ಫ್ಯಾಬ್ರಿಕ್ ಕಟರ್

ಐರನಿಯಿಂದ

ದಾರ

ಬೀಡೆಡ್ ಪಿನ್

ಮತ್ತು ಕತ್ತರಿ

ಈಗ, ಪ್ರಾರಂಭಿಸೋಣ, ಎಲ್ಲಾ ಬಟ್ಟೆ 8 ಇಂಚು ರಿಂದ 8 ಇಂಚು ಚೌಕವನ್ನು ಕತ್ತರಿಸಬೇಕು. ಈ ಪ್ರಾಜೆಕ್ಟಿಗೆ ನಮಗೆ ಬೇಕಾಗಿರುವುದು

9 ಪೀಸ್ ಬಿಳಿ ಬಟ್ಟೆ

3 ಪೀಸ್ ಚೌಕಾಕಾರವಿರುವ ಬಟ್ಟೆ



3 ಪೀಸ್ ಘಾಡವಾದ ನೀಲಿ ಬಣ್ಣದ ಬಟ್ಟೆ

3 ಪೀಸ್ ಕೆಂಪು ಬಣ್ಣದ ಬಟ್ಟೆ


ಪ್ರಿಂಟೆಡ್ ಕೆಂಪು ಬಣ್ಣದ ಬಟ್ಟೆಯನ್ನು ತೆಗೆದುಕೊಂಡು ಅರ್ಧಕ್ಕೆ ಮಡಚಿ. ಇದು ಬಟ್ಟೆಯ ಹಿಂಬದಿಯ ಭಾಗ ಮತ್ತು ಇದು ಮುಂಭಾಗ. ಇಲ್ಲಿ ತೋರಿಸಿರುವಂತೆ ಬಟ್ಟೆಯನ್ನು ನಾಲ್ಕು ಪದರ ಬರುವಂತೆ ವಿರುದ್ಧ ಕಡೆಯಿಂದ ಮಡಚಬೇಕು. ಕ್ವಿಲ್ಟಿಂಗ್ ಸ್ಕೇಲನ್ನು ಬಳಸಿ ನಾವು ಮೊದಲು ಬಟ್ಟೆಯನ್ನು 2 ಕಡೆನೂ ಕತ್ತರಿಸಬೇಕು ಇದು ಸಮನಾದ ತದಿಯನ್ನು ಪಡೆಯಲು ಸಹಾಯವಾಗುತ್ತದೆ. ಈ ಹಂತ ಬಹಳ ಮುಖ್ಯವಾದದ್ದು. ಸ್ವಲ್ಪ ಸೊಟ್ಟ ಗೆರೆಯಾದರೂ ಅಂತಿಮ ಅಂದವನ್ನು ಹಾಳುಮಾಡುತ್ತದೆ.



ಒಮ್ಮೆ ಎರಡೂ ಬದಿಯನ್ನು ಕತ್ತರಿಸಿದ ಮೇಲೆ ನಾವ್ಸ್ 8ಇಂಚಿ ರಿಂದ 8 ಇಂಚಿನ ಚೌಕವನ್ನು ತಯಾರಿಸೋಣ. 8 ಚೌಕವನ್ನು ಕೆಳಗಿನಿಂದ ಮತ್ತು ಪಕ್ಕದಿಂದ ಲೆಕ್ಕ ಮಾಡಿ ಸ್ಕೇಲನ್ನು ಅಲೈನ್ ಮಾಡಿ. ರೋಟರಿ ಫ್ಯಾಬ್ರಿಕ್ ಕಟರನ್ನು ಬಳಸಿ ಎರಡೂ ಕಡೆಯನ್ನೂ ಕತ್ತರಿಸಿ. ಅಷ್ಟೇ ನಮ್ಮ ಹತ್ತಿರ ಈಗ 4 ಕೆಂಪು ಬಣ್ಣದ ಪ್ರಿಂಟೆಡ್ ಬಟ್ಟೆ ತಯಾರಾಗಿದೆ.

ಈಗ ಕೆಂಪು ಮತ್ತು ಬಿಳಿ ಬಟ್ಟೆಯ ಕೆಲಸ ಮಾಡೋಣ.





ಕೆಂಪು ಬಣ್ಣದ ಬಟ್ಟೆಯನ್ನು ಬಿಳಿ ಬಟ್ಟೆಯ ಮೇಲೆ ಮುಂಭಾಗ ಮುಂಭಾಗವನ್ನು ನೋಡುವಂತೆ ಇಡಬೇಕು. ಈಗ ನಾವು ಚೌಕದ ನಾಲ್ಕೂ ಕಡೆ ಹೊಲೆಯೋಣ.




ಬಟ್ಟೆಯನ್ನು ಊಷಾ ಜನೋಮ್ ಮೆಮೋರಿ ಕ್ರಾಫ್ಟ್ ಕ್ವಿಲ್ಟಿಂಗ್ ಮಷೀನಿನ ಹತ್ತಿರ ತೆಗೆದುಕೊಂಡು ಹೋಗಿ. ನಾವು ಈಗಾಗಲೇ ಮಷೀನನ್ನು HPಫುಟ್ ಮತ್ತು HP ಪ್ಲೇಟಿನೊಂದಿಗೆ ತಯಾರಾಗಿಟ್ಟಿದ್ದೇವೆ. ಮಷೀನನ್ನು ನೇರ ಹೊಲಿಗೆಗೆ ಇಟ್ಟು ಚೌಕದ ಸುತ್ತಲೂ ಹೊಲೆಯಲು ಪ್ರಾರಂಭಿಸಿ. HPಫುಟ್ ಮತ್ತು ಪ್ಲೇಟಿನಿಂದ ಹೆಚ್ಚು ಸದೃಢವಾದ ಹೊಲಿಗೆ ಮತ್ತು ಉತ್ತಮವಾದ ಪ್ರಾರಂಭಕ್ಕೆ ಎಂತಹ ಬಟ್ಟೆಯಿಂದಲೂ ಸುಲಭವಾಗುತ್ತದೆ.ಇದು ಕರ್ವ್ ಗಳಿಗೆ ಮತ್ತು ನಿಖರವಾದ ಟಾಪ್ ಹೊಲಿಗೆಗೆ ಸೂಕ್ತವಾದದ್ದು. ಒಂದು ಬದಿಯ ತುದಿಯನ್ನು ತಲುಪಿದಾಗ ಮಷೀನನ್ನು ನಿಲ್ಲಿಸಿ, ಸೂಜಿಯನ್ನು ಮೇಲಕ್ಕೆ ಎತ್ತಿ ಬಟ್ಟೆಯನ್ನು ತಿರುಗಿಸಿ ಹೊಲೆಯುವುದನ್ನು ಮುಂದುವರಿಸಿ. ಇದೇ ವಿಧಾನವನ್ನು ಚೌಕದ ಎಲ್ಲಾ ಕಡೆನೂ  ಹೊಲೆಯಲು ಪುನರಾವರ್ತಿಸಿ.

ನಿಮ್ಮ ಹೊಲಿಗೆ ನೋಡಲು ಹೀಗೆ ಕಾಣಬೇಕು. ನಾವು ಈಗ ಚೌಕವನ್ನು ಡಯಾಗ್ನಲ್ಲಾಗಿ ಎರಡೂ ದಿಕ್ಕಿನಲ್ಲೂ ವೀಡಿಯೋದಲ್ಲಿ ತೋರಿಸಿರುವಂತೆ ಕತ್ತರಿಸಬೇಕು. ಇದು ನಮಗೆ ನಾಲ್ಕು ತ್ರಿಕೋನಾಕಾರವನ್ನು ಕೊಡುತ್ತದೆ.





ಪ್ರತಿ ತ್ರಿಕೋನಾಕಾರ ತುದಿಯಲ್ಲಿ ಹೊಲಿಗೆಯ ಗೆರೆ ಹೊಂದಿರುತ್ತದೆ. ಒಂದು ತ್ರಿಕೋನವನ್ನು ತೀದುಕೊಂಡು ಇಲ್ಲಿ ತೋರಿಸಿರುವಂತೆ ಬಟ್ಟೆಯನ್ನು ತೆಗೆಯಿರಿ. ಸೀಮನ್ನು ಚಪಟ್ಟೆ ಮಾಡಲು ಬಟ್ಟೆಯ ಮುಂಭಾಗವನ್ನು ಐರನ್ ಮಾಡಬೇಕು. ನಮಗೆ ಬೇಕಾದ ಫಲಿತಾಂಶ ಬರಲು ಐರನ್ ಮಾಡುವುದು ತುಂಬಾ ಮುಖ್ಯವಾದ ಹಂತ .







ಅಂಚುಗಳಲ್ಲಿ ವೀಡಿಯೋದಲ್ಲಿ ತೋರಿಸಿರುವಂತೆ ಹೆಚ್ಚಾದ್ದ ಬಟ್ಟೆಯನ್ನು ಕತ್ತರಿಸಿ. ನವೀಗ ಚೌಕಾಕಾರದ ಪೀಸ್ ಗಳು ಪರಿಪೂರ್ಣವಾಗಿದೆಯೇ ಎಂದು ಪರಿಶೀಲಿಸಬೇಕು. ಕ್ವಿಲ್ಟಿಂಗ್ ರೂಲರಿನಲ್ಲು 45 ಡಿಗ್ರಿ ಕೋನದಲ್ಲಿ ಗೆರೆಯನ್ನು ಚೌಕದ ಗೆರೆಯನ್ನು ಹೊಲೆಯಲು ಅಳತೆಮಾಡಿ 5 ಇಂಚಿನಿಂದ 5 ಇಂಚು ಚೌಕವನ್ನು ಸರಿಯಾಗಿ ಕತ್ತರಿಸಿ. ಇದೇ ವಿಧಾನವನ್ನು ಎಲ್ಲಾ ಪೀಸ್ ಗಳಿಗೂ ಪುನರಾವರ್ತಿಸಿ.




ನಾವು ಚೌಕವನ್ನು ಸೇರಿಸುವ ಮುನ್ನ , ನಿಮ್ಮ ಪೂರ್ತಿಯಾದ ಪ್ಯಾಟರ್ನ್ ತಯಾರಾದ ಮೇಲೆ ನೋಡಲು ಹೀಗೆ ಕಾಣುತ್ತದೆ. ಈ V ಆಕಾರವೇ ಚೆವ್ರಾನ್ ಪ್ಯಾಟರ್ನ್. ನಾವೀಗ ಈ ಪ್ಯಾಟರ್ನಿನ ಮೇಲ್ಭಾಗದ ಕೆಲಸ ಮಾಡೋಣ.







ಚೌಕವನ್ನು ಒಂದರ ಪಕ್ಕ ಇನ್ನೊಂದನ್ನು ಇಲ್ಲಿ ತೋರಿಸಿರುವಂತೆ ಇಡಬೇಕು. ಪ್ಯಾಟರ್ನಿನಂತೆ ಇದೆಯೇ ಎಂದು ಖಾತ್ರಿಮಾಡಿಕೊಳ್ಳಿ, ಮೊದಲ ಚೌಕವನ್ನು ಎರಡನೆಯ ಚೌಕದ ಮೇಲೆ ಮತ್ತು ಮೂರನೆಯದನ್ನು ನಾಲ್ಕನೆಯ ಚೌಕದ ಮೇಲೆ, ಐದನೆಯದನ್ನು ಆರನೆ ಚೌಕದ ಮೇಲೆ ಇಲ್ಲಿ ತೋರಿಸಿರುವಂತೆ ಇಡಬೇಕು. ಮುಂಭಾಗ ಮುಂಭಾಗವನ್ನು ನೋಡುವಂತೆ.










ನಾವೀಗ ಎಲ್ಲಾ ಚೌಕದ ಎಡಭಾಗವನ್ನು ಹೊಲೆಯಬೇಕು. ಬಟ್ಟೆಯನ್ನು ಬೀಡೆಡ್ ಪಿನ್ ಸಹಾಯದಿಂದ ಭದ್ರಗೊಳಿಸಿ. ಬಟ್ಟೆಯನ್ನು ಪ್ರೆಸ್ಸರ್ ಫುಟಿನ ಕೆಳಗೆ ಅಲೈನ್ ಮಾಡಿ ಮತ್ತು ಚೌಕದ ಪಿನ್ ಮಾಡಿರುವ ಕಡೆಯನ್ನು ಹೊಲೆಯಿರಿ. ಇದು ಮುಗಿದ ಮೇಲೆ ದಾರವನ್ನು ಕತ್ತರಿಸಿ. ಇದೇ ವಿಧಾನವನ್ನು ಉಳಿದ ಚೌಕಕ್ಕೂ ಪುನರಾವರ್ತಿಸಿ.

ಎಲ್ಲಾ ಮೂರು ಪೀಸಸ್ ಮುಗಿದ ಮೇಲೆ ಐರನಿಂಗ್ ವಿಧಾನವನ್ನು ಪುನರಾವರ್ತಿಸಿ. ಮೊದಲು ಮೇಲ್ಭಾಗ ಆನಂತರ ಸೀಮ್ ಲೈನ್ ಮತ್ತು ಸೀಮ್ ಅಲೋಯನ್ಸನ್ನು ಇಲ್ಲಿ ತೋರಿಸಿರುವಂತೆ ಐರನ್ ಮಾಡಬೇಕು. ಎಲ್ಲಾ ಮೂರು ಪೀಸನ್ನೂ ಇದೇ ವಿಧಾನದಲ್ಲಿ ಐರನ್ ಮಾಡಬೇಕು.

ಇದನ್ನು ಮುಗಿಸಿದ ಮೇಲೆ ಪೀಸ್ ಗಳನ್ನು ಇಲ್ಲಿ ತೋರಿಸಿರುವಂತೆ ಜೋಡಿಸಬೇಕು. ಈಗ ನಾವು ಮೊದಲ ಪೀಸನ್ನು ಎರಡನೆಯ ಪೀಸಿಗೆ ಹೊಲೆಯಬೇಕು. ಮುಂಭಾಗ ಮುಂಭಾಗವನ್ನು ಕಾಣುವಂತೆ ಹೊಲೆಯಬೇಕು. ಈಗ ಮೂರನೆಯ ಪೀಸನ್ನು ಅದಕ್ಕೆ ಸೇರಿಸಬೇಕು.ಮೊದಲು ಮಾಡಿದಂತೆಯೇ ಹೊಲೆದು ಐರನ್ ಮಾಡಬೇಕು. ಅಷ್ಟೇ ಇದು ಮುಗಿಯಿತು.

ನಮ್ಮ ಚೆವ್ರಾನ್ ಕ್ವಿಲ್ಟಿನ ಮೇಲ್ಭಾಗ ಈಗ ಸಿದ್ಧವಾಗಿದೆ. ಇಲ್ಲಿ ತೋರಿಸಿರುವಂತೆ ಚೌಕಗಳನ್ನು ಒಂದರ ಪಕ್ಕ ಇನ್ನೊಂದರಂತೆ ಜೋಡಿಸಿ. ಪ್ಯಾಟರ್ನ್ಇನಂತೆ ಇದೆಯೇ ಎಂದು ಖಾತ್ರಿಮಾಡಿಕೊಳ್ಳಿ, ಮೊದಲ ಚೌಕವನ್ನು ಎರಡನೆಯ ಚೌಕದ ಮೇಲೆ ಮತ್ತು ಮೂರನೆಯದನ್ನು ನಾಲ್ಕನೆಯ ಚೌಕದ ಮೇಲೆ, ಐದನೆಯದನ್ನು ಆರನೆ ಚೌಕದ ಮೇಲೆ ಇಲ್ಲಿ ತೋರಿಸಿರುವಂತೆ ಇಡಬೇಕು. ಮುಂಭಾಗ ಮುಂಭಾಗವನ್ನು ನೋಡುವಂತೆ. ಎರಡೂ ಬಟ್ಟೆಯ ಎಲ್ಲಾ ಸೀಮ್ ಲೈನ್ ಗಳು ಹೊಂದುತ್ತಿದೆಯೇ ಎಂದು ನೋಡಿಕೊಳ್ಳಿ, ಇದು ಸಿಂಕ್ ಪ್ಯಾಟರ್ನ್ಇಂದ ಹೊರ ಬರದಂತೆ ನೋಡಿಕೊಳ್ಳಬೇಕು. ಎರಡೂ ಸಾಲನ್ನೂ ಒಟ್ಟಿಗೆ ಪಿನ್ ಮಾಡಿ. ಇದನ್ನು ಹೊಲೆಯೋಣ. ಹೊಲೆಯುವ ಅದೇ ವಿಧಾನವನ್ನು ಪುನರಾವರ್ತಿಸಿ.

ನಿಮ್ಮ್ ಮೊದಲ ಚೆವ್ರಾಣ್ ಪ್ಯಾಟರ್ನ್ ಈಗ ತಯಾರಾಗಿದೆ. ನಾವೀಗ ನಮಗೆ ಎಷ್ಟು ಸಾಲು ಬೇಕೋ ಅಷ್ಟನ್ನು ಈ ಪ್ಯಾಟರ್ನಿನಲ್ಲಿ ಬೇರೆ ಬೇರೆ ಬಣ್ಣದ ಬಟ್ಟೆಯಿಂದ ಮಾಡಬಹುದು. ನಾವು ಈಗ ಚೌಕಾಕಾರದ ಮತ್ತು ನೀಲಿ ಬಣ್ಣದ ಚೆವ್ರಾನ್ ಆಕಾರವನ್ನು ಇದರಲ್ಲಿ ಮಾಡಿದ್ದೇವೆ. ಇದು ಅದ್ಭುತವಾಗಿ ಕಾಣುತ್ತಿದೆ ಅಲ್ಲವೇ?

ಇದು ಸುಲಭವಾಗಿತ್ತಲ್ಲವೇ? ಒಂದೇ ವಿಧಾನವನ್ನು ಮತ್ತೆ ಮತ್ತೆ ಪುನರಾವರ್ತಿಸಿ ಮೇರುಕೃತಿಯನ್ನು ರಚಿಸುವುದು. ಒಮ್ಮೆ ಇದರ ಅಭ್ಯಾಸವಾದರೆ ಇದು ತುಂಬಾ ಚಿಕಿತ್ಸಾದಾಯಕವಾದದ್ದು. ಸರಿ ಹಾಗಾದರೆ, ನಿಮಗಿಷ್ಟವಾದ ಡಿಸೈನನ್ನು ಸೃಷ್ಟಿಸಿ, ಬಣ್ಣಗಳಲ್ಲಿ ಆಟವಾಡುತ್ತಾ, ನಿಮಗಿಷ್ಟವಾದ ಬಟ್ಟೆಯಲ್ಲಿ ಹೊಲೆಯಿರಿ.